

(8ನೇ ಪುಟದಿಂದ)

ಕುವೆಂಪು ಅವರ ಮನೆಯತ್ತ ಲಗುಬಗೆಯಿಂದ ಹೆಜ್ಜೆ ಹಾಕಿದಾಗ, ಭೂಮ್ಯಾಕಾಶವನ್ನು ಒಂದು ಮಾಡಿದಂತೆ ಸುರಿಯುತ್ತಾ ಮಳೆ ಸಾಥ್ ನೀಡಿತ್ತು. ಕುವೆಂಪು ಮನೆ ಮಂಜಿನಷ್ಟೇ ದಟ್ಟವಾದ ಸುರಿಮಳೆಯಲ್ಲಿ ಮಬ್ಬಾಗಿ ಕಾಣಿಸಿತು. ಸಮಸ್ತ ಆಕಾಶವನ್ನು ಮುತ್ತಿದ್ದ ಕಾರ್ಗಾಲದ ಕರ್ಮುಗಿಲು!

ಮನೆಯ ಅಂಗಳದಲ್ಲಿ ಹುಲುಸಾಗಿ ಬೆಳೆದಿದ್ದ ಹುಲ್ಲು ಮಳೆಯಲ್ಲಿ ಮಿಂದು ಇನ್ನಷ್ಟು ದಟ್ಟವಾಗಿತ್ತು. ಹುಲ್ಲ ಮೇಲೆ ಹರಡಿದ ಎಲೆಗಳು ಗಾಳಿಯ ರೌದ್ರತೆಗೆ ಸಾಕ್ಷಿಯಾಗಿದ್ದವು. ಮನೆಯಂಚಿನ ಅಡಿಕೆ ತೋಟದಲ್ಲಿ ವಿವಿಧ ವರ್ಣದ ಹೂಗಳು ಅರಳಿ ನಿಂತಿದ್ದವು. ಮಳೆ ನೀರಿನಿಂದ ಭಾರವಾದ ಅಡಿಕೆ ಮರಗಳು ತೊನೆದಾಡುತ್ತಿದ್ದವು. ಹಲಸಿನ ಹಣ್ಣುಗಳು ಮರದಲ್ಲೇ ಬಿರಿದು, ಕೊಳೆತು ಧರೆ ಸೇರುತ್ತಿದ್ದವು. ಬಾಳೆಎಲೆಗಳ ಮೇಲೆ ಬೀಳುತ್ತಿದ್ದ ನೀರು ದೊರಬರ ಸದ್ದು ಮಾಡುತ್ತಿತ್ತು.

ಕುವೆಂಪು ಅವರ ಪೂರ್ವಜರು ಕಟ್ಟಿಸಿದ್ದ ಇನ್ನೂರು ವರ್ಷ ಹಳೆಯದಾದ ಈ ತೊಟ್ಟಿಮನೆಯ ಕಾಷ್ಠಶಿಲ್ಪ ಅದ್ಭುತ. ದಪ್ಪಗೋಡೆಗಳ ಎರಡು ಮಹಡಿಗಳ ಈ ಹೆಮ್ಮನೆಯಲ್ಲಿ ಕುವೆಂಪು ಮಳೆಯ ವೈಭವವನ್ನು ಹೇಗೆಲ್ಲಾ ಅನುಭವಿಸಿರಬಹುದು ಎಂದು ಯೋಚಿಸಿದೆ. ಮನೆಯ ಐಗಳ ಕೊಠಡಿ, ಬಾಣಂತಿಮನೆ, ಅಡುಗೆಮನೆ, ಸ್ನಾನದ ಮನೆ– ಹೀಗೆ ಮನೆಯ ಮೂಲೆಮೂಲೆಯಲ್ಲಿ ಓಡಾಡಿ, ಕಿಟಕಿ ಬಾಗಿಲುಗಳಲ್ಲಿ ಇಣುಕಿ, ಉಪ್ಪರಿಗೆಯಲ್ಲಿ ನಿಂತು, ಕುಳಿತು ಕವಿಕಂಡ ಮಳೆಯ ವೈಭವವನ್ನು ಅಕ್ಷರಗಳಲ್ಲಿ ಕಾಣಿಸಿದ ರೀತಿಯಲ್ಲಿ ಹುಡುಕಾಡತೊಡಗಿದೆ.

ಕವಿಮನೆಯ ಪಕ್ಕದಲ್ಲಿದ್ದ ಕಾಡಿನ ಏರುಹಾದಿಯಲ್ಲಿದೆ ಕವಿಶೈಲ. ಕಾರ್ಮುಗಿಲಿಂದ ಮೊದಲೇ ಕತ್ತಲಾವರಿಸಿದ್ದ ಈ ಹಾದಿಯಲ್ಲಿ ಮರಗತ್ತಲೂ ಸೇರಿ ಕತ್ತಲು ಇನ್ನಷ್ಟು ದಟ್ಟವಾಗಿತ್ತು. ಕ್ರಿಮಿಕೀಟ–ಗಳ ಕಿಟಕಿಟ ಸದ್ದು, ಜೀರುದನಿ ತಾರಕಕ್ಕೇರುತ್ತಿದ್ದಂತೆ ಮಳೆ ಮತ್ತೆ ಶ್....ಎಂದು ಧೀರ್ಘಾಲಾಪನೆ ಶುರುವಿಟ್ಟುಕೊಂಡಿತು. ಕವಿಶೈಲದಲ್ಲಿ ಕುವೆಂಪುರವರ ಸಮಾಧಿ ಮಳೆಯಲ್ಲಿ ಮೀಯುತ್ತಿತ್ತು. ಕವಿಶೈಲದ ಬಂಡೆಗಳು ಮಳೆಯಲ್ಲಿ ತೊಯ್ದು ಶುಭ್ರವಾಗಿ ಹೊಳೆಯುತ್ತಿದ್ದವು. ಸುತ್ತೆಲ್ಲಾ ಹಸಿರು. ಹಸಿರು ಬೆಟ್ಟಗಳ ಮಧ್ಯೆ ಆಳ ಕಣಿವೆಗಳು, ಬಿದಿರು ಹಿಂಡಿಲಿನ ಕಟಿ ಕಟಿ, ಕುರ್ರೋ ಎನ್ನುವ ಸದ್ದು, ವಿವಿಧ ಹಕ್ಕಿಗಳ ಕೂಜನ, ಆಳ ಕಣಿವೆಯಲ್ಲಿ ಹೋ ಎನ್ನುತ್ತಿದ್ದ ಮಳೆಯ ಸದ್ದು!

ಮಳೆಯಿಂದಾಗಿ ಅವತ್ತು ಕವಿಶೈಲದಲ್ಲಿ ಯಾರೊಬ್ಬ ಪ್ರವಾಸಿಗರೂ ಬಂದಿರಲಿಲ್ಲ. ಧೋ... ಎಂಬ ನಿಸರ್ಗದ ಸಹಜ ಸದ್ದನ್ನು ಹೊರತುಪಡಿಸಿದರೆ ಮತ್ತೇನೂ ಕೇಳುತ್ತಿರಲಿಲ್ಲ.

